ವಿದ್ಯುತ್ ಸಂಪರ್ಕ ಕಲ್ಪಿಸಲಾಗುವುದು, ಕಲ್ಪಿಸಬೇಕಾಗಿರುವ ತಾಂಡಾಗಳ ಸಂಖ್ಯೆ ಎಷ್ಟು ?

ಅ) ಪರಿಶಿಷ್ಟ ಜಾತಿ ವರ್ಗದವರಿಗೆ ವಿದ್ಯುತ್ ಸಂಪರ್ಕ ಸೌಲಭ್ಯ ಒದಗಿಸಿದ ಬಸದಿಗಳು ಎಷ್ಟು

ಶ್ರೀ ಜೆ.ಹೆಚ್. ಪಟೀಲ್ (ಉಪ ಮುಖ್ಯಮಂತ್ರಿಗಳು) :

ಅ) ಕಮಲಾಪುರ ಮತ ಕ್ಷೇತ್ರದಲ್ಲಿ ಒಟ್ಟು 54 ತಾಂಡಾಗಳಿದ್ದು, ಇವುಗಳ ಪೈಕಿ 50 ತಾಂಡಾಗಳಿಗೆ ಈಗಾಗಲೇ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದ್ದು 4 ತಾಂಡಾಗಳು ವಿದ್ಯುದ್ದೀಕರಣಕ್ಕಾಗಿ ಬಾಕಿ ಉಳಿದಿವೆ ಈ 4 ತಾಂಡಾಗಳ ಪೈಕಿ 2 ತಾಂಡಾಗಳಿಗೆ ಮಾರ್ಚ್ 96ರ ಅಂತ್ಯದ ವೇಳೆಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಕ್ರಮ ಕೈಗೊಂಡಿದ್ದು, ಉಳಿದ 2 ತಾಂಡಾಗಳನ್ನು ಗ್ರಾಮೀಣ ವಿದ್ಯುದ್ದೀಕರಣ ನಿಗಮದ ಯೋಜನೆಯಡಿಯಲ್ಲಿ ವಿದ್ಯುದ್ದೀಕರಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಆ) ಜನವರಿ 96ರ ಅಂತ್ಯದವರೆಗೆ ಈ ಮತ ಕ್ಷೇತ್ರದ ವ್ಯಾಪ್ತಿಯಲ್ಲಿ ಒಟ್ಟು 105 ಹರಿಜನ ಬಸ್ತಿಗಳಿಗೆ ವಿದ್ಯುತ್ ಸೌಲಭ್ಯ ಒದಗಿಸಲಾಗಿದೆ.

**ಲೋಕೋಪಯೋಗಿ ರಸ್ತೆಗಳ ದುರಸ್ತಿ**

698 - ಶ್ರೀ ಎಸ್. ರಾಜೇಂದ್ರನ್ (ಕೆ.ಜಿ.ಎಫ್) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಲೋಕೋಪಯೋಗಿ ರಸ್ತೆಗಳೆಂದೇ ಗುರುತಿಸಿ ಅವುಗಳ ದುರಸ್ತಿಗಾಗಿ ಸರ್ಕಾರ ಕಾದಿರಿಸಿರುವ ಹಣವನ್ನು ಕ್ಷೇತ್ರದ ಇತರೆ ರಸ್ತೆಗಳ ದುರಸ್ತಿಗಾಗಿ ಬಳಸಲು ಸರ್ಕಾರ ಅನುಮತಿ ನೀಡುವುದೆ?

ಆ) ಈ ಕಾರ್ಯಕ್ಕಾಗಿ ಶಾಸಕರ ಹೆಸರಿನಲ್ಲಿ 30 ಲಕ್ಷಗಳನ್ನು ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೆ ನಿಗದಿಪಡಿಸಿ ಕಾದಿಸಲಾಗಿದೆಯೇ?

ಇ) ಕಾದಿರಿಸಿದ್ದರೆ ಆ ಹಣವನ್ನು ಲೋಕೋಪಯೋಗಿ ರಸ್ತೆಗಳ ಜೊತೆಗೆ ಇತರೆ ರಸ್ತೆಗಳ ದುರಸ್ತಿಗೂ ಕೂಡ ಬಳಸಲು ಶಾಸಕರುಗಳಿಗೆ ಅಧಿಕಾರ ನೀಡುವುದೆ?

ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು) :

ಅ) ಇಲ್ಲ

ಆ) ಪ್ರತಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಲೋಕೋಪಯೋಗಿ ಇಲಾಖೆ ರಸ್ತೆಗಳನ್ನು ಮಾತ್ರ 30 ಲಕ್ಷ ರೂ.ಗಳ ಅಂದಾಜಿನಲ್ಲಿ ಅಭಿವೃದ್ಧಿ ಪಡಿಸುವ ಯೋಜನೆ ಇದಾಗಿದ್ದು, ಅಗತ್ಯಕ್ಕೆ ತಕ್ಕಂತೆ ರಸ್ತೆಗಳನ್ನು ಗುರುತು ಪಡಿಸುವ ಬಗ್ಗೆ ಶಾಸಕರ ಅಭಿಪ್ರಾಯವನ್ನು ಪಡೆಯಲಾಗುತ್ತದೆ. ಅವರ ಹೆಸರಿನಲ್ಲಿ ಹಣವನ್ನು ಕಾಯ್ದಿರಿಸುವ ಪ್ರಸ್ತಾಪವಿರುವುದಿಲ್ಲ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

**ಪಶುವೈದ್ಯ ವಿಶ್ವ ವಿದ್ಯಾಲಯಗಳು**

703 - ಶ್ರೀ ಎಸ್. ಶಿವಣ್ಣ (ತುಮಕೂರು) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪಶುವೈದ್ಯ ವಿಶ್ವವಿದ್ಯಾಲಯ ಸ್ಥಾಪಿಸುವ ಯೋಜನೆ ಸರ್ಕಾರದ ಗಮನದಲ್ಲಿದೆಯೇ?

ಆ) ಹಾಗಿದ್ದಲ್ಲಿ ಅದನ್ನು ಯಾವಾಗ ಮತ್ತು ಎಲ್ಲಿ ಪ್ರಾರಂಭ ಮಾಡಲಾಗುವುದು?

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) :

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

**ಉಡುಪಿ ನ್ಯಾಯಾಲಯದಲ್ಲಿ "ಕಾಪಿಯರನ್ನು" ಬದಲಾಯಿಸಿ ಜೆರಾಕ್ಸ್ ಯಂತ್ರವನ್ನು ಅಳವಡಿಸುವ ಬಗ್ಗೆ**

499 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ವಾರ್ತಾ ಮತ್ತು ಪ್ರಚಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಉಡುಪಿ ನ್ಯಾಯಾಲಯದಲ್ಲಿ ದಿನಕ್ಕೆ 100 ಪ್ರತಿಗಳನ್ನು ತೆಗೆಯುವ ಸಾಮರ್ಥ್ಯವಿರುವ ಕೋಪಿಯರ್ ಇರುವುದು ಸರಕಾರದ ಗಮನಕ್ಕೆ ಬಂದಿದೆಯೇ?*

*ಆ) ಇದೇ ಕೋಪಿಯರ್‌ನಿಂದ ಉಡುಪಿ, ಕುಂದಾಪುರ, ಕಾರ್ಕಳ ನ್ಯಾಯಾಲಯಗಳ ದಾಖಲೆಗಳ ಪ್ರತಿ ತೆಗೆಯಬೇಕಾದುದರಿಂದ, ತುಂಬಾ ವಿಳಂಬವಾಗುವುದೆಂಬ ದೂರು ಸಾರ್ವಜನಿಕರಿಂದ ಸರಕಾರಕ್ಕೆ ಬಂದಿದೆಯೇ?*

*ಇ) ದಿನಕ್ಕೆ 1500 ಪ್ರತಿಗಳ ಬೇಡಿಕೆ ಇರುವ ಈ ನ್ಯಾಯಾಲಯಕ್ಕೆ ಝೆರಾಕ್ಸ್ ಯಂತ್ರವನ್ನು ಅಳವಡಿಸುವ ಯೋಜನೆ ಸರಕಾರದ ಮುಂದಿದೆಯೇ?*

*ಈ) ಸರಕಾರದ ಯೋಜನೆಯಿದ್ದಲ್ಲಿ ಯಾವಾಗ ಎಷ್ಟು ತಿಂಗಳಲ್ಲಿ ಅಳವಡಿಸಲಾಗುವುದು?*

ಶ್ರೀ ಯಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ವಾರ್ತಾ ಮತ್ತು ಪ್ರಚಾರ ಸಚಿವರು) :

ಅ) ಹೌದು

ಆ) ವಿಳಂಬವಾಗುವುದು ನಿಜವಾಗಿದ್ದರೂ, ಈ ಬಗ್ಗೆ ಸಾರ್ವಜನಿಕರಿಂದ ಸರ್ಕಾರಕ್ಕೆ ದೂರುಗಳು ಬಂದಿಲ್ಲ

ಇ) ಹೌದು

ಈ) ರಾಜ್ಯದ ಎಲ್ಲ ಸಿವಿಲ್ ನ್ಯಾಯಾಲಯಗಳಲ್ಲಿ 1000 ಪ್ರತಿಗಳಿಗಿಂತ ಹೆಚ್ಚಿನ ಶಕ್ತಿಯ ಕಾಪಿಯರ್ ಯಂತ್ರಗಳನ್ನು ಒದಗಿಸಲು ಹೆಚ್ಚುವರಿ ಅನುದಾನಕ್ಕಾಗಿ ಉಚ್ಚ ನ್ಯಾಯಾಲಯದಿಂದ ಪ್ರಸ್ತಾವನೆ ಸರ್ಕಾರಕ್ಕೆ ಬಂದಿದೆ. ಇದು ಸರ್ಕಾರದ ಪರಿಶೀಲನೆಯಲ್ಲಿದೆ.

**ಕೆ.ಆರ್. ಸಾಗರದ ವಿಶ್ವೇಶ್ವರಯ್ಯ ಮತ್ಸ್ಯಾಲಯ ನಿರ್ಮಾಣ ಕಾರ್ಯ**

496 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಕೆ.ಆರ್. ಸಾಗರದಲ್ಲಿ "ವಿಶ್ವೇಶ್ವರಯ್ಯ ಮತ್ಸ್ಯಾಲಯ" ನಿರ್ಮಾಣ ಕಾರ್ಯವನ್ನು ಯಾವ ವರ್ಷದಲ್ಲಿ ಪ್ರಾರಂಭಿಸಲಾಯಿತು?*

*ಆ) ಹಾಗಿದ್ದಲ್ಲಿ ಈ ಕಾರ್ಯವನ್ನು ಇದುವರೆಗೂ ಪೂರ್ತಿಗೊಳಿಸದಿರಲು ಕಾರಣಗಳೇನು?*

*ಇ) ಸಾರ್ವಜನಿಕರ ಪ್ರವೇಶಕ್ಕೆ ಯಾವಾಗ ತೆರೆಯಲಾಗುವುದು?*

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು) :

ಅ) ಕೆ.ಆರ್. ಸಾಗರದಲ್ಲಿ ವಿಶ್ವೇಶ್ವರಯ್ಯ ಮತ್ಸ್ಯಾಲಯದ ನಿರ್ಮಾಣ ಕಾರ್ಯವನ್ನು 1987-88ನೇ ಸಾಲಿನಲ್ಲಿ ಪ್ರಾರಂಭಿಸಲಾಯಿತು.